**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 192/2024

ಪಿಡಬ್ಲು :2 ಸಿಡಬ್ಲು :2

ಸಾಕ್ಷಿಯ ಹೆಸರು : ಶ್ರೀ.ಮಹಾಲಿಂಗ ಶರಣ
ತಂದೆಯ ಹೆಸರು : ಶ್ರೀ ಮಲ್ಲಪ್ಪ ಶರಣ
ವಯಸ್ಸು : 43 ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸ್ತವ್ಯ : ಸುಟ್ಟಟ್ಟಿ
ದಿನಾಂಕ : 22-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕ ನನಗೆ ನೆನಪಿಲ್ಲ. ಸುಮಾರು 3 ವರ್ಷಗಳ ಹಿಂದೆ ಪೋಲಿಸರು ನನ್ನನ್ನು ಮತ್ತು ಪಾಂಡುರಂಗ ನಾಯಕ ಇವರನ್ನು ಸುಟ್ಟಟ್ಟಿ ಗ್ರಾಮದ ಜ್ಞಾನದೇವ ಲಕ್ಷ್ಮಣ ಮಾಳಿ ಅವರ ಮನೆಯ ಬಳಿ ಕರೆಸಿದ್ದರು. ಚಾಸಾಃ 4 ಜ್ಞಾನದೇವ ಮತ್ತು ಆರೋಪಿತರಿಗೆ ಜಗಳ ಆದ ವಿಚಾರದಲ್ಲಿ ಪಂಚನಾಮೆ ಮಾಡಲು ನನಗೆ ಕರೆಸಿದ್ದರು. ಚಾಸಾಃ 4 ಜ್ಞಾನದೇವ ಅವರು ಪೋಲಿಸರಿಗೆ ಸ್ಥಳವನ್ನು ತೋರಿಸಿದ್ದರು. ಸ್ಥಳದಲ್ಲಿ ಪೋಲಿಸರು ಒಂದು ಬಡಿಗೆಯನ್ನು ತೆಗೆದುಕೊಂಡು ಅದನ್ನು ಜಪ್ತು ಮಾಡಿ ನನ್ನ ಸಹಿ ಮಾಡಿಸಿಕೊಂಡರು. ಪಂಚಾಮೆಯನ್ನು ನಿಪಿ-2 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-2 [ಎ] ಎಂದು ಗುರುತಿಸಲಾಯಿತು. ಪಂಚನಾಮೆ ಮಾಡುವ ಸಮಯದಲ್ಲಿ ಪೋಟೊ ತೆಗೆದಿರುತ್ತಾರೆ ಎಂದು ಹೇಳಿ ಪೋಟೊದಲ್ಲಿ ತಮ್ಮ, ಚಾಸಾಃ 3 ಮತ್ತು ಚಾಸಾಃ 4 ರವರ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋ ವಿದ್ಯುನ್ಮಾನ ದಾಖಲೆಯಾಗಿದ್ದು, ಅದರ ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವು ಲಭ್ಯ ಇಲ್ಲದೇ ಇರುವ

ಕಾರಣ ಪೋಟೋವನ್ನು ಸಾಕ್ಷಿಯಾಗಿ ಗುರುತಿಸಿರುವುದಿಲ್ಲ. ಚಾಸಾಃ 4 ಜ್ಞಾನದೇವ ಅವರು ಆ ಬಡಿಗೆಯನ್ನು ಪೋಲಿಸರಿಗೆ ಕೊಟ್ಟರು. ಪೋಲಿಸರು ಪಂಚನಾಮೆ ಮಾಡಿದಾಗ ಮಧ್ಯಾಹ್ನ 03:00 ಗಂಟೆಯಿಂದ 04.00 ಗಂಟೆಯಾಗಿತ್ತು. ಆ ಬಡಿಗೆಯು ಬಿದಿರಿನ ಬಡಿಗೆ ಆಗಿದ್ದು, ಅದನ್ನು ನಾನು ಈಗ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿ ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಡಿಗೆಯನ್ನು ಮತ್ತು ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಹಿಯನ್ನು ತಮ್ಮ ಸಹಿ ಎಂದು ಗುರುತಿಸಿದ್ದಾರೆ. ಬಡಿಗೆಯನ್ನು ಈಗಾಗಲೇ ಮು.ಮಾಃ 1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು:ಆರೋಪಿತರ ಪರ ಶ್ರೀ.ಎಸ್.ಟಿ.ಕೆ ವಕೀಲರಿಂದ**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.